# ST. FRANCIS DE SALES COLLEGE

A FRANSALIAN INSTITUTE OF HIGHER EDUCATION **AUTONOMOUS**

NAAC A GRADE • AFFILIATED TO BANGALORE UNIVERSITY • AICTE APPROVED • 2(F) & 12 (B) RECOGNITION OF UGC • ISO 9001:2015 CERTIFIED

Electronics City P.O., Bengaluru - 560 100, Karnataka, INDIA (+91) 8088140679 pro@sfscollege.in www.sfscollege.in


## END SEMESTER EXAMINATION – NOV/DEC 2025

## KANNADA – I SEMESTER BA (F+R)

## 24UBA11K: ಕಲಾ ಕನ್ನಡ 1

**Time: 3 Hours** **Max. Marks: 80**

**I. ಯಾವುದಾದರೂ ಮೂರು ಪ್ರಶ್ನೆಗಳಿಗೆ ಉತ್ತರ ಬರೆಯಿರಿ (160 ಪದಗಳಿಗೆ ಮೀರದಂತೆ)** 3x10=30

1. ಪ್ರಾಚೀನ ಕವಿಗಳಾದ ಪಂಪ, ರನ್ನ, ಕುಮಾರವ್ಯಾಸ – ಇವರಲ್ಲಿ ಇಬ್ಬರ ಪರಿಚಯ ಮಾಡಿಕೊಡಿ.
2. ಮಾನವ ಕುಲದ ಅಭಿವೃದ್ಧಿ ಕಾರ್ಯಗಳು ನಿಸರ್ಗಕ್ಕೆ ಮಾರಕವಾಗಿದೆಯೇ? "ನಾವು ಮತ್ತು ಮರಗಳು" ಪದ್ಯದ ಹಿನ್ನೆಲೆಯಲ್ಲಿ ಚರ್ಚಿಸಿ.
3. ಸಾರಾರವರು ಶಾಲೆಗೆ ಹೊರಟಾಗ ಎದುರಿಸಿದ ಸವಾಲುಗಳನ್ನು ಮತ್ತು ಅಣ್ಣನ ಬೆಂಬಲವನ್ನು ಕುರಿತು ಬರೆಯಿರಿ.
4. ಸರ್ವೋದಯ ಸಿದ್ಧಾಂತವನ್ನು ವಿವರಿಸಿ.

**II. ಯಾವುದಾದರೂ ಐದು ಪ್ರಶ್ನೆಗಳಿಗೆ ಉತ್ತರ ಬರೆಯಿರಿ. (80 ಪದಗಳಿಗೆ ಮೀರದಂತೆ)** 5x5=25

1. ರತ್ನನ ಕನ್ನಡಾಭಿಮಾನ ಎಂಥದ್ದು?
2. ಮಾತೃಭಾಷೆ ಕಡ್ಡಾಯವಾಗಿ ಶಿಕ್ಷಣ ಮಾಧ್ಯಮವಾಗಬೇಕಾಗಿದೆಯೇ? ತಿಳಿಸಿ.
3. ತತ್ಸಮ ತದ್ಭವ ಎಂದರೇನು? ಉದಾಹರಣೆ ಸಹಿತ ಬರೆಯಿರಿ.
4. ತಾಯಿಯ ವಾತ್ಸಲ್ಯ ತ್ರಿಪದಿಗಳಲ್ಲಿ ಹೇಗೆ ವ್ಯಕ್ತವಾಗಿದೆ?
5. ಸಿದ್ದಲಿಂಗಯ್ಯನವರ ಬಾಲ್ಯದ ದಿನಗಳನ್ನು ಕುರಿತು ಬರೆಯಿರಿ.
6. ಸಂವಿಧಾನದ ವಿವಿಧ ಆಶಯಗಳನ್ನು ಕುರಿತು ಬರೆಯಿರಿ.

**III. ಕೆಳಕಂಡ ಪಠ್ಯವನ್ನು ಮೂರನೇ ಒಂದು ಭಾಗಕ್ಕೆ ಸಂಕ್ಷೇಪಿಸಿ ಬರೆದು, ಸೂಕ್ತ ಶೀರ್ಷಿಕೆ ನೀಡಿ.** 1x5=5

ಒಂದು ಕಾಡಿನ ನಿವಾಸಿಗಳಾಗಿದ್ದ ಕಪ್ಪೆಗಳಲ್ಲಿ ಕೆಲವು ಒಂದು ದಿನ ಆಹಾರ ಹುಡುಕಿಕೊಂಡು ಕುಪ್ಪಳಿಸುತ್ತ ಗುಂಪಾಗಿ ಹೋಗುತ್ತಿದ್ದವು. ಅವುಗಳಲ್ಲಿ ಎರಡು ಆಯ ತಪ್ಪಿ ದಾರಿಯಲ್ಲಿದ್ದ ಹಳ್ಳವೊಂದಕ್ಕೆ ಬಿದ್ದು ಬಿಟ್ಟವು, ಮಿಕ್ಕ ಕಪ್ಪೆಗಳು ಹಳ್ಳದ ಸುತ್ತ ಗುಂಪು ಕೂಡಿದವು. ಇಣುಕಿ ನೋಡಿದವು. ಹಳ್ಳವು ಆಳವಾಗಿತ್ತು. ಒಳಗೆ ಬಿದ್ದ ನತದೃಷ್ಟ ಕಪ್ಪೆಗಳನ್ನು ಕುರಿತು, "ಇಷ್ಟು ಆಳದ ಹಳ್ಳದಿಂದ ಹೇಗೆ ಮೇಲಕ್ಕೆ ಬರುತ್ತೀರಿ? ನಿಮ್ಮ ಕತೆ ಮುಗೀತು" ಎಂದು ಒಕ್ಕೊರಲಿನಿಂದ ವಟಗುಟ್ಟಿದವು. ಒಳಗೆ ಬಿದ್ದ ಕಪ್ಪೆಗಳು ಪ್ರಾಣ ಉಳಿಸಿಕೊಳ್ಳಲು ಜಿಗಿದಾಡಿದಂತೆಲ್ಲ, ಹಳ್ಳದ ಮೇಲೆ ಸುತ್ತುವರೆದು ಕುಳಿತಿದ್ದ ಕಪ್ಪೆಗಳು, "ನೀವು ಮೇಲೆ ಬರುವುದು ಸಾಧ್ಯವೇ ಇಲ್ಲ. ಸುಮ್ಮನೇ ಯಾಕೆ ಎಗರಾಡಿ ಮೈ ನೋಯಿಸಿಕೊಳ್ಳುತ್ತೀರಿ. ನೀವು ಸತ್ತಂತೆಯೇ ಸರಿ. ವ್ಯರ್ಥ ಪ್ರಯತ್ನ" ಎಂದು ಮತ್ತೆ ಮತ್ತೆ ವಟಗುಟ್ಟುತ್ತಲೇ ಇದ್ದವು. ಹಳ್ಳದ ಮೇಲಿನಿಂದ ಕಪ್ಪೆಗಳು ಸಾಮೂಹಿಕವಾಗಿ ಪದೇ ಪದೇ ವಟಗುಟ್ಟುತ್ತ ಹಳ್ಳದೊಳಗಿನ ಕಪ್ಪೆಗಳ ಪ್ರಯತ್ನವನ್ನು ನಿರುತ್ಸಾಹಗೊಳಿಸುತ್ತಿದ್ದವು, ತಳದಲ್ಲಿ ಜಿಗಿದಾಡುತ್ತಿದ್ದ ಒಂದು ಕಪ್ಪೆಯು ತಾನು ಹೋರಾಡಿ ಪಾರಾಗಬಲ್ಲೆ ಎನ್ನುವ ಅಂತಃ ಸ್ಥೈರ್ಯವನ್ನೇ ಕಳೆದುಕೊಂಡಿತು. ಮೃತ್ಯುಕೂಪದಿಂದ ಹೊರ ಬರಲಾರೆ ಎನಿಸಿ ಎದೆ ಹಾರಿ ಅಸುನೀಗಿತು.

ಇನ್ನೂ ಜೀವಂತವಾಗಿದ್ದ ಕಪ್ಪೆಯು ತನ್ನ ಪ್ರಯತ್ನವನ್ನು ಬಿಡದೆ ಮುಂದುವರಿಸುತ್ತಿತ್ತು. ಕಪ್ಪೆಗಳು ಮೇಲಿನಿಂದ "ನಿನ್ನ ಕತೆಯೂ ಅಷ್ಟೇ" ಎಂದು ನಿರಾಶಾವಾದದ ಬಲೆಯನ್ನು ನೇಯುತ್ತಿದ್ದವು. "ಜಿಗಿದಷ್ಟೂ ಮೈ ನೋಯಿಸಿಕೊಳ್ಳುತ್ತೀ, ಅಷ್ಟೇ. ನೋವುಂಡು ಸಾಯುವ ಬದಲು ನಿನ್ನ ಸ್ನೇಹಿತನಂತೆ ನೋವಿಲ್ಲದ ಸಾವನ್ನು ಒಪ್ಪಿಕೊಳ್ಳುವುದೇ ಮೇಲು" ಎಂದು ಅದೆಷ್ಟು ಸಲ ಹೇಳಿದವೋ! ಆದರೆ ಆ ಕಪೆಯು ಮತ್ತಷ್ಟು ಶಕ್ತಿ ಕೂಡಿಸಿಕೊಂಡು ಪ್ರಯತ್ನವನ್ನು ಮುಂದುವರೆಸಿ ಹಳ್ಳದ ದಡ ಸೇರಿ ಬಚಾವಾಯಿತು. ಮೇಲಕ್ಕೆ ಬಂದ ಕಪ್ಪೆಯನ್ನು ಮಿಕ್ಕ ಕಪ್ಪೆಗಳು ಸುತ್ತುವರೆದವು. ತಮ್ಮ ಮಾತುಗಳಿಗೆ ಲಕ್ಷ್ಯ ಕೊಡದೆ ಕೊನೆಗೂ ಸಾವಿನ ದವಡೆಯಿಂದ ಪಾರಾಗಿ ಬಂದ ಆ ಕಪ್ಪೆಯನ್ನು ಕುರಿತು. "ಎಷ್ಟು ಪ್ರಯತ್ನಿಸಿದರೂ ನೀನು ಬದುಕಲಾರೆ ಎಂದು ನಾವು ಹೇಳುತ್ತಿದ್ದೆವು. ನಿನಗೆ ಕೇಳಿಸುತ್ತಿರಲಿಲ್ಲವೇ?" ಎಂದು ಕೇಳಿದವು. ಆ ಕಪ್ಪೆಯು ನಿಟ್ಟುಸಿರು ಬಿಡುತ್ತಾ "ಎಲ್ಲರೂ ಸೇರಿ ಏನೋ ವಟಗುಟ್ಟುತ್ತಿದ್ದೀರಿ ಅನ್ನಿಸುತ್ತಿತ್ತು. ನನಗೆ ಕಿವಿ ಕೇಳಿಸುವುದಿಲ್ಲ. ಬಹುಶಃ ಪ್ರಯತ್ನವನ್ನು ಬಿಡದೆ ಮುಂದುವರಿಸುವಂತೆ ನನ್ನಲ್ಲಿ ಉತ್ಸಾಹ ತುಂಬುತ್ತಿದ್ದೀರಿ ಎಂದು ಕೊಂಡು ಪ್ರಯತ್ನವನ್ನು ಮುಂದುವರಿಸಿದೆ. ಧನ್ಯವಾದಗಳು" ಎಂದು ಹೇಳಿ ಮುಂದಕ್ಕೆ ಕುಪ್ಪಳಿಸಿತು. ಅವಾಕ್ಕಾದ ಮಿಕ್ಕ ಕಪ್ಪೆಗಳು ಅದನ್ನು ಹಿಂಬಾಲಿಸಿದವು. **(ಒಟ್ಟು ಪದಗಳು– 207. ಇದನ್ನು 70 ಪದಗಳಿಗೆ ಸಂಕ್ಷೇಪಿಸಿ.)**

**IV. ಸಂಕ್ಷೇಪಿಸಿದ ಬರಹ ಆಧರಿಸಿ ಎರಡು ಪ್ರಶ್ನೆ ರೂಪಿಸಿ.** 2x1=2

**V. ಇವುಗಳಲ್ಲಿ ಎರಡು ಪದಗಳನ್ನು ಬಳಸಿ ಸ್ವಂತ ವಾಕ್ಯ ರಚಿಸಿ.** 2x2=4

1. ಕನ್ನಡ ಭಾಷಾಭಿಮಾನ 2. ಬಿದಿರು
3. ಮಹಾ ವೃಕ್ಷಗಳು 4. ತಾಯಿಯ ಪ್ರೀತಿ

**VI. ರಸ್ತೆಯ ಅಗಲೀಕರಣಕ್ಕಾಗಿ ಮರಗಳನ್ನು ಕಡಿಯುತ್ತಿರುವುದರ ಕುರಿತು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಗೆ ಒಂದು ಪತ್ರ ಬರೆಯಿರಿ.** 1x5=5

**VII. ಇವುಗಳಲ್ಲಿ ನಾಲ್ಕು ಪದಗಳಿಗೆ ಅರ್ಥ ಬರೆಯಿರಿ.** 4x1=4

1. ಪರ್ಬಂಚ 2. ಗಳು 3. ಕಾಲ್ಗಡಗ
4. ತ್ರಿಪದಿ 5. ಸವರ್ಣೀಯ 6. ಪಡುವಣ

**VIII. ಇವುಗಳಿಗೆ ಕೊಟ್ಟಿರುವ ಒಂದೊಂದು ಸರಿ ಉತ್ತರವನ್ನು ಗುರುತಿಸಿ ಬರೆಯಿರಿ.** 5x1=5

1. "ಇಂಗ್ಲಿಷ್‌ನೊಡನೆ ಗುದ್ದಾಟದಲ್ಲಿ" ಲೇಖನವನ್ನು ಯಾವ ಕೃತಿಯಿಂದ ಆರಿಸಿಕೊಳ್ಳಲಾಗಿದೆ?
   ಅ. ಕುಸುಮ ಬಾಲೆ ಆ. ಎದೆಗೆ ಬಿದ್ದ ಅಕ್ಷರ ಇ. ಅಮಾಸ ಈ. ದ್ಯಾವನೂರು
2. ಬಿದಿರು ಹೂ ಬಿಟ್ಟರೆ ಅದು ಯಾವುದರ ಸಂಕೇತ?
   ಅ. ಬರಗಾಲ ಆ. ಮಳೆ ಇ. ಬೆಳೆ ಈ. ಶುಭಕರ
3. ತಾಯಿ ತನ್ನ ಮಗುವಿಗೆ ಯಾವ ದೃಷ್ಟಿಯನ್ನು ತೆಗೆಯುತ್ತಾಳೆ?
   ಅ. ಮುತ್ತಿನ ದೃಷ್ಟಿ ಆ. ಕಾಳಿನ ದೃಷ್ಟಿ ಇ. ಸಾಸಿವೆಯ ದೃಷ್ಟಿ ಈ. ಮೆಣಸಿನ ದೃಷ್ಟಿ
4. ಐನೋರ ಹೊಲ ಲೇಖನವನ್ನು ಯಾವ ಕೃತಿಯಿಂದ ಆರಿಸಿಕೊಳ್ಳಲಾಗಿದೆ?
   ಅ. ಏಕಲವ್ಯ ಆ. ಪಂಚಮ ನೆಲಸಮ ಇ. ಊರುಕೇರಿ ಈ. ಗ್ರಾಮ ದೇವತೆಗಳು
5. ಸಂವಿಧಾನ ರಚನಾ ಸಮಿತಿಯ ಅಧ್ಯಕ್ಷರು ಯಾರು?
   ಅ. ಡಾ. ಬಿ ಆರ್ ಅಂಬೇಡ್ಕರ್ ಆ. ನಾರಾಯಣರಾವ್ ಇ. ಗಾಂಧೀಜಿ ಈ. ಗೋಖಲೆ

*********

ST. FRANCIS DE SALES COLLEGE
EXCELLENCE • EFFICIENCY • TRANSFORMATION
ELECTRONICS CITY, BENGALURU